

‘ಚಂದವಳ್ಳಿಯ ತೋಟ’ ಚಿತ್ರದಲ್ಲಿ ಡಾ. ರಾಜಕುಮಾರ್, ಜಯಂತಿ

ಮುದ್ದಣ್ಣನೆಂಬ ದಳವಾಯಿಯೊಬ್ಬ ಸಿಂಹಾಸನವನ್ನು ಏರದೆ, ಪಾಳೇಗಾರರಾದ ಲಿಂಗಣ್ಣ ನಾಯಕ, ಚಿಕ್ಕಣ್ಣ ನಾಯಕ, ಸೂರ್ಯಕಾಂತಿ ರಂಗಪ್ಪ ನಾಯಕ ಇಂಥವರನ್ನು ನೆಪ ಮಾತ್ರಕ್ಕೆ ಸಿಂಹಾಸನದಲ್ಲಿ ಕೂರಿಸಿ ತಾನೇ ಸರ್ವಾಧಿಕಾರಿಯಾಗಿ ಮೆರೆದಾಡುವ ಪರಿಯನ್ನು, ಅವನ ಮುತ್ಸದ್ದಿತನ, ಕಪಟ, ಕ್ರೌರ್ಯ, ಸರ್ವಾಧಿಕಾರಿಯ ದೌಲತ್ತು, ತಂತ್ರ, ಕುತಂತ್ರಗಳನ್ನು ಕಾದಂಬರಿ ಉದ್ದಗಲಕ್ಕೂ ತ.ರಾ.ಸು. ಬೀಭತ್ಸವಾಗಿ ಚಿತ್ರಿಸಿ ಪಾತ್ರಕ್ಕೊಂದು ಅಮೋಘತೆ ತಂದುಕೊಟ್ಟಿದ್ದಾರೆ. ಯಾರಿಂದಲೂ ಸದೆ ಬಡಿಯಲಾಗದ ಅಂಥವನನ್ನು ರಣಹುಚ್ಚಿ ಗಿರಿಜೆ ಎಂಬ ಸಾಮಾನ್ಯ ಹೆಣ್ಣೊಬ್ಬಳಿಂದ ಸಂಹಾರ ಮಾಡಿಸುವ ಚೋದ್ಯವೂ ಇದೆ. ಕಾರಣ, ಆ ದಿನಮಾನದಲ್ಲಿ ‘ಸ್ತ್ರೀ ಸಬಲೀಕರಣ’ದ ಬಗ್ಗೆ ಚರ್ಚೆಗಳಾಗುತ್ತಿದ್ದ ಕಾಲ. ಇದರಿಂದ ಸ್ಫೂರ್ತಿ ಪಡೆದು ಗಿರಿಜೆ ಎಂಬ ಕಾಲ್ಪನಿಕ ಪಾತ್ರವನ್ನು ತಂದು ಸ್ತ್ರೀಗೊಂದು ಮಹತ್ವ ತಂದುಕೊಡುತ್ತಾರೆ ತ.ರಾ.ಸು.

‘ವಿಜಯೋತ್ಸವ’ ಭಾಗ 1 ಮತ್ತು 2 ಕೃತಿಗಳಲ್ಲಿ ಫ್ರೆಂಚ್‌ಜಾನ್, ಅವನ ಸಮರ ತಂತ್ರ, ತಾಂತ್ರಿಕ ನೈಪುಣ್ಯ ನಾಯಕನೊಡನೆ ಆಪ್ತತೆಗಿಂತ ಮಿಗಿಲಾಗಿ ಗಾಯಕಿ ಮೆಹರ್‌ಬಾನು ಮತ್ತು ಜಾನ್ ನಡುವಿನ ಮಧುರ ಪ್ರಣಯ ಪ್ರಸಂಗಕ್ಕೇ ಹೆಚ್ಚು ಒತ್ತು ಕೊಡುವ ತ.ರಾ.ಸು., ಭರಮಣ್ಣ ನಾಯಕನನ್ನು ಸೈಡ್‌ಲೈನ್‌ನಲ್ಲಿ ಚಿತ್ರಿಸಿ, ಈ ಕಾದಂಬರಿಗಳನ್ನು ಪುಟಗಟ್ಟಲೆ ಸಂಭಾಷಣೆಯಿಂದಲೇ ತುಂಬಿ ಬಿಡುತ್ತಾರೆ.

★★★

ಸಾಲು ಸಾಲು ಐತಿಹಾಸಿಕ ಕೃತಿಗಳನ್ನು ದುರ್ಗದ ಕುರಿತಾಗಿಯೇ ಬರೆದರೂ, ದುರ್ಗದವರು ಬಹಳ ಅತೃಪ್ತರು. ‘ಸುಬ್ಬಣ್ಣ ನೀನು ಏನೇನೋ ಬರಿತಿದ್ದೀಯಾ. ಯಾವನೋ ದಳವಾಯಿ ಬಗ್ಗೇನೇ ಮೂರು ನಾಲ್ಕು ಕಾದಂಬರಿ ಬರೆದೆ. ಮದಕರಿನಾಯಕನ ಬಗ್ಗೆ ಬರಿ ಸುಬ್ಬಣ್ಣಾ’ ಎಂದು ತ.ರಾ.ಸು. ದುರ್ಗಕೆ ಬಂದಾಗೆಲ್ಲಾ ದುರ್ಗದ ಹಿರಿಯರಾದ ಸಿ.ಟಿ. ಸಿದ್ಧನಾಯಕ, ಆರಾಧ್ಯ ಹಕ್ಕೊತ್ತಾಯ ಮಂಡಿಸುತ್ತಾರೆ. 1970ರ ದಶಕದಲ್ಲಿ ಅವರನ್ನು ದುರ್ಗಕ್ಕೆ ಕರೆಸಿ ಊರ ತುಂಬಾ ಮೆರವಣಿಗೆ ತಂದು ದೊಡ್ಡದಾಗಿ ಗೌರವಿಸಿದ ಹಿರಿಯರು, ಮದಕರಿನಾಯನ ಕುರಿತು ಬರೆಯುವುದಾಗಿ ತ.ರಾ.ಸು. ಅವರಿಂದ ಮಾತು ಪಡೆದು ಸಂಭ್ರಮಿಸುತ್ತಾರೆ. ಇದೆಲ್ಲಾ ನಡೆದು ವರ್ಷಗಳುರುಳಿದರೂ ತ.ರಾ.ಸು. ಮದಕರಿಯ ಬಗ್ಗೆ ಲೇಖನಿ ಎತ್ತದೆ ಬೇರೆ ವಸ್ತುಗಳಲ್ಲಿ ಲೀನರಾಗುತ್ತಾರೆ. ಐತಿಹಾಸಿಕ ಕೃತಿಗಳು ಬಹಳಷ್ಟು ಅಧ್ಯಯನ, ಶ್ರಮ, ಕಾಲ ಬೇಡುತ್ತವೆ. ಬರೆದೇ ಜೀವನ ನಿರ್ವಹಿಸಬೇಕಾದ ಸಂದಿಗ್ಧದಲ್ಲಿದ್ದ ತ.ರಾ.ಸು. ಸಾಮಾಜಿಕ ಕೃತಿಗಳತ್ತಲೇ ಹೆಚ್ಚು ಕೇಂದ್ರೀಕರಿಸುತ್ತಾರೆ.